**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 25.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಟಿ.ಆರ್.ಎಂ. ವಕೀಲರಿಂದಃ**

ನಿ.ಪಿ.-2 ರ ಛಾಪಾ ಕಾಗದಲ್ಲಿ ಮೊದಲ ಪಕ್ಷಗಾರರ ಹೆಸರು ರವಿ ಎಂದಷ್ಟೇ ನಮೂದಿಸಿದ್ದು ಅವರ ಪೂರ್ಣ ಹೆಸರು ಅಥವಾ ಇತರೇ ಪ್ರತಿವಾದಿಗಳ ಹೆಸರು ನಮೂದಿರುವುದಿಲ್ಲ ಎಂದರೆ ಸಾಕ್ಷಿಯು ಅದು ಟೈಪಿಂಗ್ ಮಿಸ್ಟೇಕ್ ಅಗಿರಬಹುದೆಂದು ನುಡಿಯುತ್ತಾರೆ. ನಿ.ಪಿ.-2 ಕ್ಕೆ ಬಿಕ್ಲಮ್ ದಾರರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸ.ನಂ. 30/1 ಎ ನ ಒಟ್ಟು 35 ಗುಂಟೆ ಜಮೀನು ದುರಸ್ತಿಯಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯ 09 ಗುಂಟೆ ಜಮೀನು ಇನ್ನೂ ದುರಸ್ತಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ದುರಸ್ತಿಯಾಗಿದ್ದು ಸರ್ವೆ ಸ್ಕೆಚ್ ಗೆ ಅರ್ಜಿ ಕೊಟ್ಟರೆ 1 ತಿಂಗಳಿಗೆ ದುರಸ್ತಿಯಾಗುತ್ತದೆಂದರೆ ಸಾಕ್ಷಿಯು ಇರಬಹುದೆಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಹಾಗು ಅವರ ಕುಟುಂಬದವರು ನಮಗೆ ಸೇರಿದ 02 ಎಕರೆ ಜಮೀನನ್ನು 2022 ನೇ ಇಸವಿಯವರೆಗೆ ಗುತ್ತಿಗೆಗೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಗುತ್ತಿಗೆ ಮಾಡಿಕೊಂಡಿರುವುದಿಲ್ಲ ನಾನು ವ್ಯವಸಾಯ ಮಾಡುವಂತೆ ತಿಳಿಸಿದ್ದು ಅದಕ್ಕೆ ಪ್ರತಿಯಾಗಿ ಅವರು ಯಾವುದೇ ಹಣವನ್ನು ಸಹ ನೀಡಿರುವುದಿಲ್ಲವೆಂದು ನುಡಿಯುತ್ತಾರೆ. 2022 ರ ನಂತರ 1 ನೇ ಪ್ರತಿವಾದಿ ನಮ್ಮ ಜಮೀನನ್ನು ಗುತ್ತಿಗೆ ಮಾಡುವುದನ್ನು ನಿಲ್ಲಿಸಿರುತ್ತಾರೆ ಹಾಗು ನಾನು ತಿಳಿಸಿದ ಯಾವುದೇ ಜಮೀನಿನ ಕೂಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಆ ರೀತಿ 1 ನೇ ಪ್ರತಿವಾದಿಯು ನನ್ನ ಜಮೀನಿನಲ್ಲಿ ವ್ಯವಸಾಯ ಮಾಡುವುದನ್ನು ಹಾಗು ಕೂಲಿ

ಕೆಲಸಕ್ಕೆ ಬರುವುದನ್ನು ನಿಲ್ಲಿಸಿದ್ದರಿಂದ ನಾನು ಪ್ರತಿವಾದಿಗಳು ಸಾಲದ ಆಧಾರಕ್ಕಾಗಿ ಮಾಡಿಕೊಟ್ಟ ಪತ್ರವನ್ನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಮ್ಮ ಮೇಲಿನ ನಂಬಿಕೆಯಿಂದ ಪ್ರತಿವಾದಿಗಳು ಯಾವುದೇ ಪತ್ರಕ್ಕೆ ಸಹಿ ಮಾಡುವಂತೆ ಕೇಳಿದ್ದರೂ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ ತಿಳಿಸಿರುವ ಚೆಕ್ಕುಬಂದಿಯನ್ನು 09 ಗುಂಟೆಗೆ ಮಾತ್ರ ನೀಡಿರುತ್ತೇನೆ. ಸದರಿ ಸ.ನಂ. 30/1ಎ ನ ಸಂಪೂರ್ಣ 35 ಗುಂಟೆಯ ಚೆಕ್ಕುಬಂದಿಯನ್ನು ಹೇಳಲು ಅಷ್ಟಾಗಿ ಗೊತ್ತಿರುವುದಿಲ್ಲ. ನಾನು ದಾವಾ ಷೆಡ್ಯೂಲ್ ನಲ್ಲಿ ತಿಳಿಸಿರುವ ಚೆಕ್ಕುಬಂದಿ ಸಂಪೂರ್ಣ 35 ಗುಂಟೆಗೆ ಸೇರಿರುತ್ತದೆಂದರೆ ಸರಿಯಲ್ಲ. ಈ ದಾವೆಯ ವ್ಯವಹಾರವನ್ನು ಆಧಾಯ ತೆರಿಗೆಯಲ್ಲಿ ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಒಟ್ಟಾರೆಯಾಗಿ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ಆಧಾರಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**